

ಧಾವಿಸಿದಳು. ಎದುರಿಗೆ ಗೆಳತಿ ವಾಸಂತಿಯನ್ನು ಕಂಡು 'ಓ ನೀನಾ ಬಾ ಬಾ' ಎನ್ನುತ್ತಾ ಒಳಬಂದಳು, ಅತ್ತು ಅತ್ತು ಮುಖ ಬಾಡಿ ಹೋಗಿತ್ತು.

'ಮದುವೆ ಎಲ್ಲಾ ಹೇಗಾಯ್ತು? ಅಪ್ಪ ಹುಷಾರಾಗಿದ್ದಾರಾ?' ಎಂದು ಕೇಳಿದ ಗೆಳತಿಯ ಮಾತಿಗೆ ಇವಳ ಕಣ್ಣುಗಳು ತುಂಬಿ ಬಂದಿದ್ದವು. ನಡೆದದ್ದನ್ನೆಲ್ಲಾ ಹೇಳಿ ಗೆಳತಿಯನ್ನಪ್ಪಿಕೊಂಡು ಅಳತೊಡಗಿದಳು. ಅವಳ ಎದೆಯಲ್ಲಿ ಕವಿದಿದ್ದ ಮೋಡ ಮಳೆಯಾಗಿ ಸುರಿದಂತಾಯ್ತು. 'ಕರುಳ ಕುಡಿ ಸುಖವಾಗಿರಲೆಂದು ಹೆತ್ತವರು ಏನೆಲ್ಲಾ ತ್ಯಾಗ ಮಾಡುತ್ತಾರೆ. ಆದರೆ ಹೆತ್ತವರ ಕಷ್ಟಕ್ಕೆ ನೆರವಾಗುವ ಯೋಗ್ಯತೆ ಇದ್ರೂ ನನ್ನಿಂದ ಏನೂ ಮಾಡೋದಿಕ್ಕೆ ಸಾಧ್ಯ ಆಗ್ತಿಲ್ಲ. ನಾನು ಅಪ್ಪನಿಗೆ ದುಡ್ಡು ಕಳಿಸ್ತೀನಿ ಅಂತ ಹೇಳಿದೀನಿ. ಬಂದ ಮೇಲೆ ಅಪ್ಪನ ಜೊತೆ ಫೋನ್‌ನಲ್ಲಿ ಮಾತನಾಡಲೂ ಆಗದೆ ಒದ್ದಾಡ್ತಾ ಇದೀನಿ. ಆಪರೇಶನ್ ಮುಂದೂಡಿದಷ್ಟೂ ಅಪ್ಪನ ಜೀವಕ್ಕೆ ಅಪಾಯ ಎಂದಿದ್ದಾರಂತೆ ಡಾಕ್ಟ್ರು. ನಾನು ಸ್ವಾರ್ಥಿ ಕಣೇ. ಅವರ ಹೊಟ್ಟೇಲಿ ಮಗಳಾಗಿ ಹುಟ್ಟಬಾರದಿತ್ತು. ನಾನು ಪರಿಸ್ಥಿತಿಯ ಕೈಗೊಂಬೆ ಯಾಗಿದೀನಿ. ನನ್ನ ತಂದೆ ಹತ್ರ ಕ್ಷಮೆ ಕೇಳೋ ಯೋಗ್ಯತೆನೂ ಇಲ್ಲ ನಂಗೆ. ಏನ್ಮಾಡ್ಲಿ, ಅಸಹಾಯಕಳು ನಾನು' ಎಂದು ಗೋಳಾಡಿದಳು.

'ನಿನ್ನ ಕಷ್ಟ ಅರ್ಥ ಆಗ್ತಿದೆ ನಮಿತಾ. ನೀನು ಊರಿಗೆ ದುಡ್ಡು ತಾನೇ ಕಳಿಸ್ಬೇಕು? ದೇವರು ಏನಾದರೂ ದಾರಿ ತೋರಿಸ್ತಾನೆ. ನನ್ನಿಂದಾದ ಸಹಾಯ ಮಾಡ್ತೀನಿ. ಧೈರ್ಯ ತಂದ್ಕೋ. ಅಳೋದ್ರಿಂದ ಪರಿಹಾರ ಸಿಗಲ್ಲ. ನಾನು ಮತ್ತೆ ನಾಳೆ ಸಿಗ್ತೀನಿ. ಮಕ್ಕಳು ಶಾಲೆಯಿಂದ ಬರೋ ಸಮಯ ಆಯ್ತು. ಬರ್ತೀನಿ ಬಾಯ್' ಎಂದು ಹೇಳಿ ಮನೆಗೆ ಬಂದೆ.

ಪೇಂಟಿಂಗ್ ಬೋರ್ಡ್‌ಗಳು ಹೆಣ್ಣಿನ ಸೂಕ್ಷ್ಮ ಮನಸ್ಸನ್ನು ಅನಾವರಣಗೊಳಿಸಿದ್ದವು. ಮತ್ತೆ ಮತ್ತೆ ನೋಡ ಬೇಕೆನಿಸುವಷ್ಟು ಸುಂದರವಾಗಿದ್ದವು. ಕೂಡಲೇ ನಮಿತಾಳಿಗೆ ರೆಡಿಯಾಗುವಂತೆ ಫೋನ್ ಮಾಡಿದೆ. ನಾನು ಮೆಂಬರ್ ಆಗಿದ್ದ ಲೇಡೀಸ್ ಕ್ಲಬ್‌ಗೆ ಕರೆದುಕೊಂಡು ಹೋದೆ. ಅಲ್ಲಿನ ಅನೇಕರಿಗೆ ಸಮಯ ಕಳೆಯುವುದೇ ಸವಾಲಿನಂತೆ. ಅವರನ್ನೆಲ್ಲಾ ಇವಳಿಗೆ ಪರಿಚಯಿಸಿದೆ. ನಾಳೆಯಿಂದಲೇ ಪೇಂಟಿಂಗ್ ಕ್ಲಾಸ್ ಆರಂಭಿಸಲು ಹೇಳಿದೆ. ಖುಷಿಯಿಂದಲೇ ಒಪ್ಪಿಕೊಂಡಳು.

ತಾಸಿಗೊಂದರಂತೆ ದಿನಕ್ಕೆ 3 ಕ್ಲಾಸುಗಳು. ಇವಳ ಪ್ರತಿಭೆಗೆ ಕ್ಲಬ್ಬಿನ ಸದಸ್ಯರೆಲ್ಲಾ ನಿಬ್ಬೆರಗಾಗಿದ್ದರು. ತಿಂಗಳು ಕಳೆಯುವಷ್ಟರಲ್ಲಿ ಒಂದು ಲಕ್ಷ ಸಂಪಾದನೆಯಾಗಿತ್ತು. ನಮಿತಾ ನನ್ನ ಕೈ ಹಿಡಿದು ಕುಣಿದಾಡಿದಳು. ಅವಳ ಸಂತೋಷದಲ್ಲಿ ನಾನೂ ಭಾಗಿಯಾದೆ. ಅವಳೊಡನೆ ನಾನೇ ಹೋಗಿ ಅವಳ ಅಪ್ಪನ ಅಕೌಂಟಿಗೆ ದುಡ್ಡು ವರ್ಗಾಯಿಸಿ ಬಂದೆ. ಮನೆಗೆ ಬಂದವಳೆ ಖುಷಿಯಿಂದ ತಂದೆಗೆ ಮೇಲ್ ಮಾಡಲು ತನ್ನ ಐಡಿ ಓಪನ್ ಮಾಡಿದಳು.

ಆಗಷ್ಟೇ ಆ ಕಡೆಯಿಂದ ಒಂದು ಸಂದೇಶ ಇವಳಿಗಾಗಿ ಕಾದು ಕುಳಿತಿತ್ತು. ಓದುತ್ತಿದ್ದಂತೆ ಅಲ್ಲಿಯೇ ಕುಸಿದು ಬಿದ್ದಳು. ಯಾಕೆ ಏನಾಯ್ತು? ಎಂದು ಸಾವರಿಸಲು ಹೋದೆ. ಅಳುತ್ತಾ ಲ್ಯಾಪ್‌ಟಾಪ್ ಕಡೆ ಬೆರಳು ತೋರಿಸಿದಳು. ಅವಳನ್ನು ಸಮಾಧಾನ ಮಾಡಲು ತೋಚದೆ ನಿಶ್ಚಲಳಾಗಿ ನಿಂತೆ. ■

# ಅವಲಂಬಿತರು

■ ಸಿರಿಮೂರ್ತಿ ಕಾಸರವಳ್ಳಿ

ಕತ್ತಲೆಯ ಚಾದರದ ಮುಸುಕಿಂದ ಸೂರ್ಯ ಹೊರ ಬರುವ ಮೊದಲೇ ರಾಜಶೇಖರ ತಮ್ಮ ಬೆಳಗಿನ ಕಾರ್ಯ ಮುಗಿಸಿ ಸ್ವಲ್ಪವೂ ಸಪ್ಪಳ ಮಾಡದೆ ಒಂದು ಕಪ್ ಕಾಫಿ ಮಾಡಿ ಮನೆಯ ಬಾಲ್ಕನಿಯಲ್ಲಿ ಕುಳಿತು ನಕ್ಷತ್ರಗಳ ಮಿಣುಕು ಹೊಳಪನ್ನು ನೋಡುತ್ತಾ ಕಾಫಿ ಹೀರುತ್ತಾರೆ.

ತನ್ನ ಕಿಸೆಯಲ್ಲಿ ಮನೆಯ ಕೀ ಇದೆಯಾ ಕೈಯಲ್ಲಿ ವಾಚ್ ಕಟ್ಟಿದ್ದೀನಾ ಜೇಬಲ್ಲಿ ಸ್ವಲ್ಪ ಹಣ, ಮೊಬೈಲ್ ಇದೆಯಾ ಎನ್ನುವುದನ್ನು ಮುಟ್ಟಿ ಮುಟ್ಟಿ ನೋಡಿ ಖಾತ್ರಿ ಮಾಡಿಕೊಳ್ಳುತ್ತಾರೆ. ಅವುಗಳಲ್ಲಿ ಒಂದನ್ನು ಮರೆತರೂ ಅವರು ರತ್ನಳ ಕೋಪಕ್ಕೆ ಗುರಿಯಾಗಿ ಅವಳ ಇಡೀ ದಿನದ ಮೌನಕ್ಕೆ ಹೆದರುತ್ತಾರೆ. ಹೇಳುವುದು ತನ್ನ ಒಳಿತಿಗೇ ಎಂದು ಅವರಿಗೆ ಗೊತ್ತು. ಆದರೂ ಹಾಳು ಮರೆವು ಅವರನ್ನು ಕೆಲವೊಮ್ಮೆ ಕಾಡಿ ಕಂಗಾಲು ಮಾಡಿ ಬಿಡುತ್ತದೆ.

ಹೊರಡುವ ಮೊದಲು ರತ್ನ ಮಲಗಿದ ಮಂಚದ ಬಳಿ ಬಂದು ಅವಳನ್ನೊಮ್ಮೆ ನೋಡಿ ಮೆಲ್ಲಗೆ ಬಾಗಿಲೆಳೆದು ವಾಕಿಂಗ್ ಹೊರಡುವುದು ಅವರು ನಡೆಸಿಕೊಂಡು ಬಂದ ಅಭ್ಯಾಸ.

ರತ್ನ ಸಾವಿರ ಬಾರಿ ಹೇಳಿದ್ದಾರೆ, ಯಾಕೆ ಅಷ್ಟು ಬೇಗ ಹೋಗಬೇಕು? ಬಂದು ನೀವು ಯಾವ ಸಾಮ್ರಾಜ್ಯ ಕಟ್ಟಲಿಕ್ಕುಂಟು? ಬೆಳಕು ಬಿಟ್ಟ ಮೇಲೆ ಹೋಗಿ. ಆದರೆ ಅವರಿಗೆ ತಾವು ಬ್ಯಾಂಕ್ ಉದ್ಯೋಗಿ ಆಗಿದ್ದಾಗಿಂದ ಇದೇ ಪದ್ಧತಿ ನಡೆಸಿಕೊಂಡು ಬಂದಿದ್ದಾರೆ.

ರತ್ನ ಮಾಡುವ ಬೆಳಗಿನ ಗಾಢ ನಿದ್ರೆ ಅವರಿಗೆ ಆಶ್ಚರ್ಯವಾಗುತ್ತದೆ. ತಾವೂ ಕಣ್ ಮುಚ್ಚಿ ಅತ್ತಿತ್ತ ಹೊರಳಾಡಿ ಪ್ರಯತ್ನ ಪಟ್ಟಿದ್ದಾರೆ. ಆದರೆ ತಮಗದು ಅಸಾಧ್ಯ ಎಂದು ಗೊತ್ತಾಗಿದೆ.

ತಮ್ಮ ಕಾಲೋನಿ ದಾಟಿ ಮುಖ್ಯ ರಸ್ತೆಗೆ ಬಂದ ಮೇಲೆ ಜನರ ಓಡಾಟ ಶುರುವಾಗುತ್ತದೆ. ತನ್ನಂತೆ ವಾಕಿಂಗ್ ಹೋಗುವವರು, ಹೂವು ತರಕಾರಿ ಮಾರುವ ವರು, ಅವರ ತಳ್ಳುಗಾಡಿಗಳು, ಹಾಲಿನ ವ್ಯಾನ್‌ಗಳು.. ಹೀಗೆ ಅಂದಿನ ಬದುಕು ಒಂದೊಂದಾಗಿ ತೆರೆದುಕೊಳ್ಳುತ್ತದೆ.

ಉದ್ದಕ್ಕೆ ರಸ್ತೆಯಲ್ಲಿ ಹೋಗುವುದು ಅವರಿಗೆ ಬಹಳ ಇಷ್ಟ. ಕೆಲವೊಮ್ಮೆ ರಸ್ತೆ ಬಿಟ್ಟು ಸರ್ವೀಸ್ ರಸ್ತೆಗೆ ಬರುತ್ತಾರೆ. ಆಗ ಪ್ರತಿ ಮನೆಗಳನ್ನು ಲಕ್ಷ್ಯ ಕೊಟ್ಟು ಗಮನಿಸುತ್ತಾರೆ. ತನ್ನ ಹಾಗೇ ಎದ್ದವರು ಬಾಗಿಲಲ್ಲಿ ನಿಂತಿದ್ದರೆ ಪರಿಚಯದ ನಾಂದಿಗೆ ನಗುತ್ತಾರೆ. ಬೇಕಿದ್ದವರು ಪ್ರತಿ ನಗು ನಗುತ್ತಾರೆ. ಕೆಲವರು ಇವರ ಜೊತೆ ಹೆಜ್ಜೆ ಹಾಕಲು ಬರುತ್ತಾರೆ. ಹಾಗೆ ಗೆಳೆಯರಾಗುತ್ತಾರೆ.

ರಸ್ತೆಯ ಕಡೆಯಲ್ಲಿ ಒಂದು ಅರಳಿ ಕಟ್ಟೆ. ದಣಿವಾದಾಗ ಅಲ್ಲಿ ಸ್ವಲ್ಪ ಹೊತ್ತು ಕುಳಿತು ಕೊಳ್ಳುತ್ತಾರೆ. ಅವರು ಬರುವ ಮೊದಲೇ ಬಂದು ಕುಳಿತವರೊಬ್ಬರೊಂದಿಗೆ ಸ್ವಲ್ಪ ಪರಿಚಯ. ಹೆಚ್ಚು ಮಾತಿಲ್ಲ. ಸದಾ ಅಂತರ್ಮುಖಿ ಕೇಳಿದ್ದಕ್ಕೊಂದು ಉತ್ತರ. ಕೆಲವೊಮ್ಮೆ ಇವರ ಜೊತೆ ಹೊರಟು ಅವರ ಮನೆ ಬಂದಾಗ ವಿದಾಯ ಹೇಳುತ್ತಾರೆ.

ಆ ದಿನ ಎದ್ದ ಗಳಿಗೆ ಸರಿ ಇರಲಿಲ್ಲವೇನೋ? ತನ್ನ ರತ್ನಳನ್ನು ನೋಡಿ ಹೊರಡುವ ದಿನಚರಿಯೂ ಅಂದು ತಪ್ಪಿ ತಿರುಗಿ ಮಲಗಿದವಳ ಬೆನ್ನು ನೋಡಿ ಹೊರಟಿದ್ದರು.

ಅರಳಿಕಟ್ಟೆ ಬಂದಾಗ ಆ ಪರಿಚಿತರು ಅಲ್ಲಿ ಕುಳಿತಿದ್ದರು. ರಾಜಶೇಖರ್ ಮಾಮೂಲಾಗಿ ಕೇಳಿದರು. 'ವಾಕಿಂಗ್ ಆಯ್ತಾ?'

ಆ ವ್ಯಕ್ತಿ 'ನಿಮ್ಮಿಂದ ಒಂದು ಉಪಕಾರ ಆಗಬೇಕಿತ್ತು'ಎಂದರು. 'ಏನು ಹೇಳಿ' ಎಂದಾಗ ಅವರು ಬಹಳ ಸಂಕೋಚದಿಂದ 'ನನ್ನ ಮನೆ ಹಾದಿ ಮರೆತಿದ್ದೀನಿ. ನೆನಪಿಗೇ ಬರುತ್ತಿಲ್ಲ. ನೀವು ನೋಡಿದ್ದೀರಲ್ಲ, ನನ್ನನ್ನು ಅಲ್ಲಿ ಬಿಡುತ್ತೀರಾ?' ರಾಜಶೇಖರರಿಗೆ ಒಮ್ಮೆ ಏನೂ ತಿಳಿಯದೆ ನಿಧಾನವಾಗಿ ಅರ್ಥವಾಗಿ ಮರುಕದಿಂದ 'ಅದಕ್ಕೇನು ಬನ್ನಿ ಹೋಗುವ' ಎಂದರು.

ಹಾದಿಯಲ್ಲಿ, 'ಯಾಕೆ ಮರೆತಿರಿ? ಯಾವಾಗ್ನಿಂದ ಹೀಗೆ ಮರೆಯುತ್ತಿದ್ದಿರಿ' ಎಂದು ಕೇಳಿದ್ದರು.

ಅವರು ಮನೆ ಮರೆತಿದ್ದು ಇದೇ ಮೊದಲು. 'ಮನೆಯಲ್ಲಿ ಯಾರಿದ್ದಾರೆ?' ಎಂಬ ಪ್ರಶ್ನೆಗೆ 'ಮಗ ಸೊಸೆ ಇದ್ದಾರೆ. ಇವಳು ಹೋಗಿ ವರ್ಷವಾಯ್ತು. ಅಂದಿನಿಂದ ಸ್ವಲ್ಪ ಮರೆವು, ಈ ದಿನ ಹೀಗಾಯ್ತು' ಎಂದರು.